ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟ್‌ನಲ್ಲಿ.

ಸ್ಯ 1889ನೇ ಇಸವಿ ಮಿಸಲೇನಿಯಸ್ ಪ|| ನಂಬರ್ 123.

ಅರ್ಜೀದಾರು.	ಕೌ|| ಅರ್ಜೀದಾರು.
ರಂಗಪ್ಪ ವಗೈರೆ 12 ಜನರು.	ಐಯ್ಯಪ್ಪ ವಗೈರೆ 10 ಜನರು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಶ್ರೀನಿವಾಸಪುರದಲ್ಲಿ ಯಿರುವ ಶ್ರೀನಿವಾಸಪುರ ವ್ಯವಸಹಾಯ ಕಂಪೆನಿ ಲಿಮಿಟೆಡ್ ಷೇರುದಾರ್‌ರುಗಳು ಈಗ್ಯೆ ಸುಮಾರು 4—5 ತಿಂಗಳಿಂದ ಈ ಕಂಪೆನಿಗೆ ಸಂಬಂಧಪಟ್ಟ ಷೇರುದಾರ್‌ರುಗಳು ರೂಲ್ಸ್ ಅನುಸರಿಸಿ ಕಾಲಸ್ ಕೊಡತಕ್ಕ ಕಾಲಸ್‌ಗಳು ಕೊಡದೆ ಹೋದ ಸಬಬ್ ಷೇರುದಾರ್‌ರುಗಳಿಗೆ ಕ್ರಮವಾಗಿ ಪಾವತಿ ಆಗತಕ್ಕ ಬೋನಸುಗಳು ನಿಂತು ಹೋಗಿ ಯಿರುತ್ತೆಂತಲೂ ಬೋನಸ್ ಸಲ್ಲತಕ್ಕ ಕೆಲವರು ಕಂಪೆನಿಮೇಲೆ ಕೋಲಾರ ಮುನಸಿಫ್ ಕೋರ್ಟ್‌ನಲ್ಲಿ ಡಿಕ್ರಿಗಳು ಹೊಂದಿಯಿರುತ್ತಾರೆಂತಲೂ ಕೆಲವರು ದಾಖಲ್ಮಾಡಿದ ದಾವಾಗಳು ಫೈಸಲಿಲ್ಲದೆ ಬಾಕಿಯಲ್ಲಿ ಯಿರುತ್ತೆಂತಲೂ ಡಿಕ್ರಿಪಡೆದಿರುವ ಮತ್ತು ದಾವೇಮಾಡಿಯಿರುವ ಷೇರುದಾರ್‌ರುಗಳು ಜಫ್ತ್ಗೆ ವಗೈರೆ ಮೂಲಕ ಮೂಲಧನವನ್ನು ವಿಲೇ ಮಾಡಿಕೊಂಡು ಹೋದಲ್ಲಿ ಬಾಕಿ ಷೇರುದಾರ್‌ರುಗಳಿಗೆ ನಷ್ಟ ಸಂಭವಿಸುತ್ತೆಂತಲೂ ಹಾಲಿ ಕೋಲಾರ ಮುನಸಿಫ್ ಕೋರ್ಟ್‌ನಲ್ಲಿ ಫೈಸಲಾಗದೆ ಬಾಕೀಲಿ ಯಿರುವ ಯಲ್ಲಾ ಮೊಕದ್ದಮೆಗಳಲ್ಲಿಯೂ ಮುಂದಿನ ಕ್ರಮಗಳು ನಡಿಸದಂತೆ ಆ ಕೋರ್ಟ್‌ಗೆ ನೋಟೀಸ್ ಕೊಟ್ಟು ಕಂಪೆನಿ ವ್ಯೆಡಫ್ ಮಾಡಿಸಿ ಲಿಕ್ವಿಡೇಟರನ್ನ ಮೊಕರರ್ ಮಾಡಿಸಬೇಕೆಂದು ವಗೈರೆ ಮೇಲ್ಕಂಡ ರಂಗಪ್ಪ ವಗೈರೆರು ಅರ್ಜಿಕೊಟ್ಟಿರುತ್ತಾರೆ. ಯಿದರ ವ್ಯವಸ್ಥೆಬಗ್ಯೆ ಸ್ಯ 1890ನೇ ಇಸವಿ ಫಿಬ್ರವರಿ ತಿಂಗಳು 11ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರ್‌ಮಾಡಿ ಯಿಧೆ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟ್ ರೂಬರೂ ಆಕ್ಷೇಪಣೆ ಯಿರತಕ್ಕ ವರೆಲ್ಲರೂ ಅವರಾಗಲಿ ಅಥವಾ ಅವರಕಡೆ ಕ್ರಮವಾಗಿ ವೊಕ್ಕ್ಯಾರಿ ಪಡದ ಅಡ್ವೊಕೇಟರಾಗಲಿ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಯಪಡಿಸ ಬಹುದು.

ತಾರೀಖು 10ನೇ ಮಾಹೆ ಜನವರಿ ಸ್ಯ 1890ನೇ ಇಸವಿ.

ಹುಕುಂ ಬಮೋಜೀಬ್,
ಎಸ್. ಆರ್. ಸುಬ್ಬರಾಯರ್,
ರೆಜಿಸ್ಟ್ರರ್.

Mysore Govt. Central Press, Bangalore.—1890.